

# ರಾಘವ್ ಒಂದು ದೃಶ್ಯದ ಗಮ್ಮತ್ತು

ಹಿಂದಿ ಚಿತ್ರರಂಗದಲ್ಲಿ ಸಿನಿಮಾಗಳಿಗಿಂತ ಹೆಚ್ಚು ಸದ್ದನ್ನು ಒಟಿಟಿ ಕಂಟೆಂಟ್ ಮಾಡುತ್ತಿದೆ. ಇದೀಗ ba...ds of Bollywood ವೆಬ್ ಸರಣಿಯ ಸರದಿ. ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಕನಸಿನ ಯೋಜನೆ ಇದು. ಅವರು ಹೊಸ ತಲೆಮಾರಿನ ಪ್ರತಿಭೆಗಳನ್ನು ಕಲೆಹಾಕಿ ಇಂತಹ ಸಾಹಸಕ್ಕೆ ಕೈಹಾಕಿದ್ದು, ಅದಕ್ಕೆ ಒಳ್ಳೆಯ ಫಲವೇ ಸಿಕ್ಕಿದೆ.

ರಾಘವ್ ಜೋಯಲ್ ಅಭಿನಯದ ಒಂದು ದೃಶ್ಯವಂತೂ ರೀಲ್ಸ್ ಮೂಲಕ ಹರಿದಾಡಿ, ಸಂಚಲನ ಮೂಡಿಸಿದೆ. ಇಮ್ರಾನ್ ಹಾಶ್ಮಿ ಜಾಗವೊಂದಕ್ಕೆ ಬರುತ್ತಾರೆ. ಅವರನ್ನು ಕಂಡೊಡನೆ ರಾಘವ್, ಅವರ 'ಮರ್ಡರ್' ಸಿನಿಮಾದ 'ಕಹೋ ನಾ ಕಹೋ ಏ ಆಯೀ ಬೋಲ್ತಿ ಹೈ' ಹಾಡನ್ನು ಹಾಡುತ್ತಾರೆ. ಒಂದೆರಡು ಸಾಲು ಹಾಡಿದ ಮೇಲೊಂದು ಮೌನ. ಇಮ್ರಾನ್ ಒಂದೆರಡು ಹೆಜ್ಜೆ ಮುಂದಿಡುತ್ತಾರೆ. ಮತ್ತೆ ರಾಘವ್ ಹಾಡನ್ನು ಮುಂದುವರಿಸಿ, ಅದರಲ್ಲಿನ ಅರೇಬಿಕ್ ಪದಗಳನ್ನೆಲ್ಲ ಹಾಡುತ್ತಾರೆ. ತಾವು ಇಮ್ರಾನ್ ದೊಡ್ಡ ಅಭಿಮಾನಿ ಎಂದು ಹೇಳಿಕೊಳ್ಳುತ್ತಾರೆ. ಈ ದೃಶ್ಯ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದೆ.



ಆರ್ಯನ್ ಖಾನ್

ರಾಘವ್ ಜೋಯಲ್ ಅವರಲ್ಲಿ ಸ್ಥಳದಲ್ಲೇ ಹೊಸತೇನನ್ನೋ ನೀಡುವ ಪ್ರತಿಭೆ ಇದೆ. ಅದನ್ನು ಶಾರುಕ್ ಪುತ್ರ ಕೂಡ ಗುರುತಿಸಿದ್ದಾರೆ. ಸ್ಕ್ರಿಪ್ಟ್ ನಲ್ಲಿ ಇಲ್ಲದೆ ಇರುವ ಅಂಶಗಳನ್ನೂ ಸೇರಿಸಿಕೊಳ್ಳಲು ರಾಘವ್ ಅವರಿಗೆ ಅನುಮತಿ ನೀಡಿದ್ದರ ಪರಿಣಾಮವೇ ಆ ದೃಶ್ಯ. ಆ ಸನ್ನಿವೇಶದ ಕುರಿತು ಚರ್ಚೆ ನಡೆಸುತ್ತಿದ್ದಾಗ, ಇಮ್ರಾನ್ ಹಾಶ್ಮಿ ಪ್ರವೇಶ ಆಗುವಾಗ ಏನು ಮಾಡಬೇಕು ಎಂಬ ವಿಷಯ ಬಂತು. ಆಗ ರಾಘವ್ ಅವರಿಗೆ ಯಾವುದಾದರೂ ಒಂದು ಹಾಡು ಹಾಡುವಂತೆ ಆರ್ಯನ್ ಸೂಚಿಸಿದರು. ಆಗ ಎರಡು ಹಾಡಿನ ಆಯ್ಕೆಗಳು ರಾಘವ್ ಎದುರಲ್ಲಿ ಇತ್ತು. ಆದರೆ, ಅವರು ಸಹಜವಾಗಿಯೇ ಈ ಹಾಡನ್ನು ಗುನುಗತೊಡಗಿದರು. ಹಾಡುವಾಗ ತಂತಾನೇ ಅವರಿಗೆ ಒಮ್ಮೆ ಕಣ್ತುಂಬಿಬಂತು. ಒಣ ಅಭಿಮಾನ ಅಷ್ಟೇ ಅಲ್ಲದ, ತುಂಟತನವೂ ಬೆರೆತ, ಖುದ್ದು ಇಮ್ರಾನ್ ಅವರನ್ನೂ ಮುಜುಗರಕ್ಕೆ ಈಡು ಮಾಡುವಂತಹ ಭಾವಾಭಿನಯ ಅದು.

'ಸಾಮಾನ್ಯವಾಗಿ ಸ್ಕ್ರಿಪ್ಟ್‌ಗೆ ಬದ್ಧರಾಗಿಯೇ ಬಹುತೇಕ ದೃಶ್ಯಗಳನ್ನು ಚಿತ್ರೀಕರಿಸುತ್ತಾ ಇದ್ದೆವು. ಅದೊಂದು ದೃಶ್ಯ ತಂತಾನೇ ಸಂಭವಿಸಿತು. ಅದಕ್ಕೆ ಆರ್ಯನ್ ಒಪ್ಪಿದ್ದು ಒಂದು ರೀತಿಯಲ್ಲಿ ಮೆಚ್ಚತಕ್ಕ ಸಂಗತಿ. ಈಗ ಆ ದೃಶ್ಯ ನೋಡಿಯೇ ಅನೇಕರು ನನ್ನ ಅಭಿಮಾನಿಗಳಾಗಿರುವುದಾಗಿ ಹೇಳುತ್ತಿದ್ದಾರೆ. ಜನರಿಗೆ ಯಾವುದು ಯಾವಾಗ ಹಿಡಿಸುವುದೋ ಹೇಳುವುದು ಕಷ್ಟ' ಎಂದು ರಾಘವ್ ಪ್ರತಿಕ್ರಿಯಿಸಿದ್ದಾರೆ.

ಕಿಲ್ ಹಿಂದಿ ಸಿನಿಮಾದಿಂದ ಹಿರಿತೆರೆಯಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡ ರಾಘವ್ ಈಗ ನೆಟ್‌ಫ್ಲಿಕ್ಸ್‌ನ ವೆಬ್ ಸರಣಿಯಲ್ಲೂ ಮೋಡಿ ಮಾಡಿದ್ದಾರೆ. ಸರಣಿಯಲ್ಲಿ ಬಾಬಿ ಡಿಯೋಲ್ ಅವರಂತಹ ಅನುಭವಿ ಕೂಡ ಅಭಿನಯಿಸಿದ್ದು, ಶಾರುಕ್ ಪುತ್ರ ಈಗ ಗೆಲುವಿನ ವಿಶ್ವಾಸದಲ್ಲಿದ್ದಾರೆ.

# ಸೋದರಳಿಯನಿಗೆ ರೆಹಮಾನ್ ಉಡುಗೊರೆ



ಖ್ಯಾತಿ ತಮಿಳು ಚಿತ್ರದ ಸಂಗೀತ ನಿರ್ದೇಶನಕ್ಕೆ ಇತ್ತೀಚೆಗೆ ಜಿ.ವಿ. ಪ್ರಕಾಶ್ ಕುಮಾರ್ ಅವರಿಗೆ ರಾಷ್ಟ್ರ ಪ್ರಶಸ್ತಿ ಸಂದಿತು. ಅವರಿಗೆ ಒಲಿದ ಎರಡನೇ ರಾಷ್ಟ್ರ ಪ್ರಶಸ್ತಿ ಇದು. ಎ.ಆರ್. ರೆಹಮಾನ್ ಸೋದರಳಿಯ ಎನ್ನುವ ನೆರಳಿನಿಂದ ಆಚೆ ಬಂದ ಪ್ರತಿಭಾವಂತ ಈ ಯುವಕ.

ಪ್ರಕಾಶ್ ಸಾಧನೆಯನ್ನು ಮೆಚ್ಚಿ ರೆಹಮಾನ್ ಒಂದು ಅಪರೂಪದ ಉಡುಗೊರೆ ಕೊಟ್ಟರು. ಬಿಳಿ ಬಣ್ಣದ ಅಪರೂಪದ ಪಿಯಾನೊ ಆ ಉಡುಗೊರೆ. ಮಾವನೇ ಅಳಿಯನಿಗೆ ಉಡುಗೊರೆ ಕೊಡುವುದರಲ್ಲಿ ಏನು ವಿಶೇಷವಿದೆ ಅನ್ನಿಸಬಹುದು. ಆದರೆ, ರೆಹಮಾನ್ ತಮ್ಮ ಹೃದಯಕ್ಕೆ ಹತ್ತಿರ ಎನಿಸುವ ಕೆಲಸ, ಸಾಧನೆ ಮಾಡಿದವರಿಗೆ ಮಾತ್ರ ಇಂತಹ ಉಡುಗೊರೆ ನೀಡುತ್ತಾರೆ.

ರೆಹಮಾನ್ ಕೊಟ್ಟಿದ್ದು ಹೊಸ ಪಿಯಾನೊ ಅಲ್ಲ. ಖುದ್ದು ಅವರೇ ನುಡಿಸುತ್ತಿದ್ದ ಇಷ್ಟದ ಪಿಯಾನೊ ಅದು. ಹೀಗಾಗಿ ಪ್ರಕಾಶ್ ಅವರಿಗೆ ಈ ಉಡುಗೊರೆ ತುಂಬಾ ಅಪರೂಪದ್ದು ಎನಿಸಿದೆ.

'ನಾನು ಅವರನ್ನು ರೆಹಮಾನ್ ಸರ್ ಎಂದೇ ಕರೆಯೋದು. ಅಂತಹ ಮೇರು ವ್ಯಕ್ತಿತ್ವದ, ಸಂಗೀತ ಸಾಧಕನ ಉಡುಗೊರೆಗೆ ಬೆಲೆ ಕಟ್ಟಲಾಗದು. ಅದೂ ಅವರು ಬಳಸುತ್ತಿದ್ದ ಇಷ್ಟದ ಪಿಯಾನೋವನ್ನು ನನಗೆ ಕೊಟ್ಟಿದ್ದಾರೆ. ನಾನು ನಿಜಕ್ಕೂ ಭಾಗ್ಯವಂತ' ಎಂದು ಪ್ರಕಾಶ್ ಖುಷಿಯನ್ನು ಹಂಚಿಕೊಂಡು, ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಜಿ.ವಿ. ಪ್ರಕಾಶ್ ಕುಮಾರ್